**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎನ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 224 (163) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10-12-2024 |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 5 ವರ್ಷಗಳಲ್ಲಿ ಕೈಮಗ್ಗ ಹಾಗೂ ಜವಳಿ ಉದ್ಯಮದ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು; ಹಾಗೂ ಕೈಮಗ್ಗದ ಬಟ್ಟೆಗಳ ಪ್ರಚಾರ ಹಾಗೂ ಬಳಕೆ ಹೆಚ್ಚಾಗಲು ಕೈಗೊಂಡ ಕ್ರಮಗಳು ಯಾವುವು; | ಕಳೆದ 5 ವರ್ಷಗಳಲ್ಲಿ ಕೈಮಗ್ಗ ಹಾಗೂ ಜವಳಿ ಉದ್ಯಮದ ಅಭಿವೃದ್ಧಿಗೆ ಇಲಾಖೆ ವತಿಯಿಂದ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>**ಯೋಜನೆಗಳ ವಿವರ:-**<br><br>• ನೇಕಾರ ಸಮ್ಮಾನ್ ಯೋಜನೆಯಡಿ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ನೇಕಾರರಿಗೆ ರೂ.5,000/- ಗಳ ಆರ್ಥಿಕ ನೆರವು ನೀಡುವುದು.<br>• ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ.<br>• ಕೈಮಗ್ಗ ವಿಕಾಸ ಯೋಜನೆಯಡಿ ಹೊಸ ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇಕಡ 50 ರಷ್ಟು ಸಹಾಯಧನ ಒದಗಿಸುವುದು.<br>• ಕೈಮಗ್ಗಗಳಿಗೆ ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸಲು ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೂನ್ಯ ಹಾಗೂ ಶೇ.1 ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ, ಶೇ.3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ನೀಡಲಾಗುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್ / ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೇ.8 ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು.<br>• ಕೈಮಗ್ಗ ನೇಕಾರರ ಸಹಕಾರ ಸಂಘಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ರಾಜ್ಯ ಸರ್ಕಾರದಿಂದ ಶೇ.20 ರಿಬೇಟ್ ಅನ್ನು ಮರು ಸಂದಾಯವಾಗಿ ಪಾವತಿಸಲಾಗುತ್ತಿದೆ. |

...2

| | | |
|---|---|---|
| | | • ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/– ರ ಸಹಾಯಧನ ನೀಡಲಾಗುವುದು.<br>• ಮಿತವ್ಯಯ ನಿಧಿ ಯೋಜನೆಯಡಿ ನೇಕಾರರ ಮಜೂರಿಯಿಂದ ಶೇ.8 ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇ.8 ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು ಜಮೆಯಾದ ಮೊತ್ತಕ್ಕೆ ಶೇ.12 ರ ಬಡ್ಡಿಯನ್ನು ನೀಡಲಾಗುವುದು.<br>• ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣಕ್ಕಾಗಿ ಸರ್ಕಾರದಿಂದ ಯೋಜನಾ ವೆಚ್ಚದ ಶೇ.80 ರಷ್ಟು ಅನುದಾನ ನೀಡಲಾಗುವುದು.<br>• ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಹಿಂದಿನ 3 ವರ್ಷಗಳ ಸರಾಸರಿ ವಹಿವಾಟಿನ ಮೇಲೆ ಶೇ.50 ರಷ್ಟುನ್ನು ಅಥವಾ ರೂ.5.00 ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟು ಒಂದಾವರ್ತಿ ಪ್ರೋತ್ಸಾಹಧನ ನೀಡಲಾಗುವುದು.<br>• ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ.<br>• 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ.<br>• ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ.<br>• ಮಗ್ಗ ಪೂರ್ವ ಸೌಲಭ್ಯ ಸಹಾಯಧನ.<br>• ಸೈಜಿಂಗ್ ಘಟಕ ಸ್ಥಾಪನೆಗೆ ಸಹಾಯಧನ.<br>• ಮಿನಿ ಪವರ್‌ಲೂಮ್ ಪಾರ್ಕ್ ಸ್ಥಾಪನೆಗೆ ಸಹಾಯಧನ.<br>• ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆಗೆ ಸಹಾಯಧನ.<br>• ವಿದ್ಯುತ್ ರಿಯಾಯಿತಿ ಸಹಾಯಧನ – 01 ರಿಂದ 10 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲಾಗುತ್ತಿದೆ ಹಾಗೂ 10.01 ರಿಂದ 20 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸಲಾಗುತ್ತಿದೆ.<br>• 150 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ರೇಪಿಯರ್ / ಲಾಳಿರಹಿತ ವಿದ್ಯುತ್ ಮಗ್ಗ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸಲಾಗುವುದು.<br>• 20 ಹೆಚ್.ಪಿ ಇಂದ 200 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ SCSP / TSP ವಿದ್ಯುತ್ ಮಗ್ಗ ಘಟಕಗಳಿಗೆ Energy Charges ನಲ್ಲಿ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸಲಾಗುವುದು. |

…3

| | | |
|---|---|---|
| | | • ನೇಕಾರರ ಪ್ಯಾಕೇಜ್ ಯೋಜನೆ – ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ರಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ.<br>• ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.2/– ಸಹಾಯಧನ.<br>• ಸಹಕಾರಿ ನೂಲಿನ ಗಿರಣಿಗಳು ಭಾರತೀಯ ಹತ್ತಿ ನಿಗಮ (Cotton Corporation of India) ದಿಂದ ಖರೀದಿಸಿದ ಹತ್ತಿಯ ಮೌಲ್ಯದ ಮೇಲೆ ಶೇ.5% ರಷ್ಟು ಸಹಾಯಧನ.<br>• ಕೈಮಗ್ಗ ಬಟ್ಟೆಗಳ ಪ್ರಚಾರ ಮತ್ತು ಬಳಕೆ ಹೆಚ್ಚಿಸಲು ರಾಷ್ಟ್ರೀಯ ಕೈಮಗ್ಗ ಮೇಳ (NHE). ರಾಜ್ಯ ಮಟ್ಟದ ಕೈಮಗ್ಗ ಮೇಳ (SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (DHE) ಗಳ ಆಯೋಜಿಸಿ ಕೈಮಗ್ಗ ಉತ್ಪನ್ನಗಳ ಮಾರಾಟ ಮೇಳ ಆಯೋಜಿಸಲಾಗಿರುತ್ತದೆ. |
| (ಆ) | ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡುವಲ್ಲಿ ಕೈಮಗ್ಗದ ಬಟ್ಟೆಗಳನ್ನು ಬಳಸಲಾಗುತ್ತದೆಯೇ; ಇಲ್ಲವಾದಲ್ಲಿ ಬಳಸದಿರಲು ಕಾರಣಗಳೇನು? | ಶಾಲಾ ಮಕ್ಕಳಿಗೆ ಸಮವಸ್ತ್ರ ನೀಡುವಲ್ಲಿ ಕೈಮಗ್ಗದ ಬಟ್ಟೆಗಳನ್ನು ಬಳಸಲಾಗುತ್ತಿದೆ. |

**ಸಂಖ್ಯೆ: CI 246 JAKE 2024**

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು**